೨

ಮಕ್ಕಳು ಓದುಗರಾಗಲು ನೆರವು

– ಆರ್ ಅಮೃತವಲ್ಲಿ

ಸಾರಾಂಶ: ಮಕ್ಕಳು ನಿಜವಾದ ಅರ್ಥದಲ್ಲಿ ಓದುಗರಾಗುವುದು ಎಂದರೇನು ಎಂಬುದನ್ನು ಈ ಲೇಖನವು ಚರ್ಚಿಸುತ್ತದೆ. ಸಾಕ್ಷರತೆಯೆಂದರೆ ಕೇವಲ ಹಸ್ತಾಕ್ಷರವನ್ನು ಮಾಡಲು ಸಾಧ್ಯವಾಗಿಸುವ ಕೌಶಲವೋ, ಅಥವಾ ನೀಡಲಾದ ಒಂದು ಪಠ್ಯವನ್ನು ಓದುವ ಸಾಮರ್ಥ್ಯವೋ ಅಥವಾ ಸ್ವತಂತ್ರವಾಗಿ ಓದಲು ಕಲಿಯುವ ಒಂದು ದೀರ್ಘ ಪಯಣವೋ ಎಂಬುದನ್ನು ಈ ಲೇಖನವು ವಿವರಿಸುತ್ತದೆ.

ಪ್ರಮುಖ ಪದಗಳು: ಸ್ವತಂತ್ರ ಓದು – **independent reading,** ಸಂವಾದಾತ್ಮಕ ಮತ್ತು ಪರಿಹಾರಾತ್ಮಕ ಮಾದರಿ– **interactive compensatory reading,** (ಓದಿನಲ್ಲಿ) ನಿರ್ದಿಷ್ಟ ಪದ/ವಿಷಯ ಹುಡುಕುವುದು ಮತ್ತು ಸಾರಾಂಶವನ್ನು ಹಿಡಿಯುವುದು– **scanning and skimming, pedagogy,** ಬೋಧನಾ ವಿಧಾನ ಕಲಿಕಾರ್ಥಿಯ ಸ್ವಾಯತ್ತತೆ– **learner autonomy,** ಗಟ್ಟಿ ಓದು– **loud reading,** ಓದಲು ಬಯಸಿ ಆರಿಸಿಕೊಂಡ ಪಠ್ಯ– **text of one's choice,** ಬಯಸಿದ್ದನ್ನು ಓದುವ ಸಾಮರ್ಥ್ಯ– **ability to read what he/she wants,** ಓದುವ ಮಾದರಿಗಳು– **models of reading,** ಮೇಲಿಂದ ಕೆಳಕ್ಕೆ– **top down,** ಕೆಳಗಿನಿಂದ ಮೇಲಕ್ಕೆ– **bottom up,** ಹೆಚ್ಚುವರಿ ಓದುವ ಸಮಯ– **additional reading hours,** ಪಠ್ಯದೊಳಗಿನ ಪಠ್ಯ– **book within the textbook,** ಓದುವ ಕೌಶಲ್ಯಗಳು ಹಾಗೂ ವಿಧಾನಗಳ ಸಂಗ್ರಹ– **repertoire of reading skills.**

ಸಾಕ್ಷರತೆಗೆ ದಾರಿಗಳು

ಜನಗಣತಿಯ ಉದ್ದೇಶದಿಂದ ನೋಡಿದಾಗ, ಒಬ್ಬ ವ್ಯಕ್ತಿ ತನ್ನ ಹೆಸರನ್ನು ಬರೆಯಲು ಸಾಧ್ಯವಾಗುವುದು 'ಸಾಕ್ಷರತೆ' ಎಂದಾಗುತ್ತದೆ. ಆದರೆ ಸಾಕ್ಷರತೆ ಎಂಬುದನ್ನು ಸಹಿಗೆ ಸೀಮಿತಗೊಳಿಸಿದರೆ, ಅದರ ಅರ್ಥವನ್ನು ಸಂಕುಚಿತಗೊಳಿಸಿದ ಹಾಗೆ ಆದೀತು. ಹಾಗೆಯೇ ಸಾಕ್ಷರತೆಯೆಂದರೆ ಅಕ್ಷರಗಳನ್ನು ಗುರುತಿಸಿ, ಅವನ್ನು

ಜೋಡಿಸಿ, ಒಂದು ಪದವನ್ನು ಓದುವ, ಇಲ್ಲವೆ ಒಂದು ಪಠ್ಯವನ್ನು ಓದುವ ಸಾಮರ್ಥ್ಯವೆಂದಷ್ಟೇ ಅಲ್ಲ. ಇವೆಲ್ಲವೂ ಸಾಕ್ಷರತೆಯನ್ನು ಪಡೆಯುವ ಹಾದಿಯಲ್ಲಿ ಗಳಿಸಬಹುದಾದ ಕುಶಲತೆಯೆಂದು ಮಾತ್ರ ಹೇಳಬಹುದು. ನಿಜವಾದ ಅರ್ಥದಲ್ಲಿ, ಸಾಕ್ಷರತೆಯೆಂದರೆ ತಾನೇ ಓದಲು ಬಯಸಿ ಆರಿಸಿಕೊಂಡ ಪಠ್ಯವನ್ನು ಓದಿ, ಅರ್ಥ ಮಾಡಿಕೊಳ್ಳುವುದಾಗಿದೆ. (ಸಾಕ್ಷರತೆಯೆಂದರೆ ಕೇವಲ ಒಂದು ಪಠ್ಯವನ್ನು ಓದಿ, ಅದನ್ನು ಆಧರಿಸಿದ ಪ್ರಶ್ನೆಗಳನ್ನು ಸರಿಯಾಗಿ ಉತ್ತರಿಸುವುದಲ್ಲ ಅಥವಾ ಗಣಿತವೆಂದರೆ ಪುಸ್ತಕದಲ್ಲಿ ನೀಡಿರುವ ಪ್ರತಿಯೊಂದು ಲೆಕ್ಕಕ್ಕೆ ಸರಿಯಾದ ಪರಿಹಾರವನ್ನು ಕಂಡುಕೊಳ್ಳುವುದಲ್ಲ).

'ತಾನೇ ಓದಲು ಬಯಸಿ ಆರಿಸಿಕೊಂಡ ಪಠ್ಯ'ವು ಬಹಳ ಗೌಣವಾಗಿದ್ದಿರ ಬಹುದು. ಉದಾಹರಣೆಗೆ, ರಸ್ತೆಯಲ್ಲಿ ಕಾಣಬಹುದಾದ ಸಾಮಾನ್ಯವಾದ ಒಂದು ಚಿಹ್ನೆ; ಇಲ್ಲವೆ ಅಲ್ಪಕಾಲಿಕವಾಗಿ ಓದಲು ಸಿಗುವ ಓದುವ ಒಂದು ವಸ್ತು, ಅಂದರೆ ದಿನಪತ್ರಿಕೆ ಇಲ್ಲವೆ ಒಂದು ಪೋಸ್ಟರ್ ಆಗಿರಬಹುದು, ಅಥವಾ ಕಛೇರಿಗೆ ಸಂಬಂಧಿಸಿದ ಸೂಚನಾ ಪತ್ರ ಆಗಿರಬಹುದು. ಉದಾಹರಣೆಗೆ ಗುತ್ತಿಗೆ ಕೆಲಸದ ಪತ್ರವಾಗಿರಬಹುದು, ಅಥವಾ ಬೌದ್ಧಿಕ ಇಲ್ಲವೆ ಕಾಲ್ಪನಿಕತೆಯನ್ನು ಉದ್ದೀಪಿಸುವಂತಹ ಪಠ್ಯವಾಗಿರಬಹುದು. ಮೊದಲಿಗೆ, ಸಾಕ್ಷರತೆಯೆಂಬುದು ಒಂದು ಪಯಣವೆಂದು ನಾವು ಗುರುತಿಸಬೇಕು. ಶಾಲೆಯಲ್ಲಿ ಮಗು ಈ ಪಯಣವನ್ನು ಪ್ರಾರಂಭಿಸಲು ನಾವು ನೆರವಾಗುತ್ತೇವಷ್ಟೆ. ಅನಂತರ ಆ ಮಗು ಯಾವ ಹಾದಿಗಳನ್ನು ದಾಟುತ್ತದೆ, ಎಷ್ಟು ದೂರ ಪಯಣಿಸುತ್ತದೆ, ಹಾಗೂ ಯಾವ ಗತಿಯಲ್ಲಿ ಮುಂದೆ ಹೋಗುತ್ತದೆ ಎಂಬುದು ನಮ್ಮ ಕೈಯಲ್ಲಿಲ್ಲ. ಅದು ಆಯಾ ವ್ಯಕ್ತಿಯ ನಿರ್ಧಾರಗಳನ್ನು ಅವಲಂಬಿಸಿರುತ್ತದೆ.

ಹೀಗಾಗಿ, ಸಾಕ್ಷರತೆಯತ್ತ ಮಕ್ಕಳು ತಮ್ಮದೇ ಆದ ಹಾದಿಯನ್ನು ಕಂಡುಕೊಂಡು ಬೆಳೆಯುವಂತೆ ಅವರನ್ನು ಸಶಕ್ತಗೊಳಿಸುವುದು ನಮ್ಮ ಕೆಲಸವಾಗಿದೆ. ಶಾಲೆಯನ್ನು ಬಿಡುವ ಮಗುವೊಂದು ತಾನು ಬಯಸಿದ್ದನ್ನು ಓದುವ ಸಾಮರ್ಥ್ಯವನ್ನು ಹೊಂದಿ ಹೊರಹೋಗಬೇಕು. ಹೇಳಿಕೊಟ್ಟದ್ದನ್ನಷ್ಟೇ ಓದಲು ಬರುವಂತಹ ವ್ಯಕ್ತಿ ಓದುಗನೆನಿಸಿಕೊಳ್ಳುವುದಿಲ್ಲ. ಓದುಗರನ್ನು ಸೃಷ್ಟಿಸುವುದೇ ಓದನ್ನು ಹೇಳಿಕೊಡುವ ನಿಜವಾದ ಉದ್ದೇಶವಾಗಿರುತ್ತದೆ.

ಓದುವ ಸಾಮರ್ಥ್ಯವೆಂಬುದು ಮಗುವಿನ ಜೀವನದಾದ್ಯಂತ ಉಳಿಯು ವಂತಹ ಕೌಶಲವಾಗಿದೆ. ಈ ಕೌಶಲವು ಮಗು ಬೆಳೆದಂತೆ ವೃದ್ಧಿಸುತ್ತಾ ಹೋಗುತ್ತದೆ. ಹೊರತು ಅದು ನಾವು ಮೊದಲೇ ಪೂರ್ಣ ಪ್ರಮಾಣದಲ್ಲಿ ನೀಡಬಹುದಾದ ಸಾಮರ್ಥ್ಯವಲ್ಲ.

ಈ ಲೇಖನದಲ್ಲಿ ಮೊದಲು ನಾನು ಸಾಕ್ಷರತೆಯ ಕೆಲವು ಮಾದರಿಗಳನ್ನು ಚಿತ್ರಿಸಲು ಪ್ರಯತ್ನಿಸುತ್ತೇನೆ. ಅನಂತರ ನಮ್ಮ ಶಾಲೆಗಳಲ್ಲಿ ಮಗುವೊಂದು ಸ್ವತಃ ತಾನು ಬಯಸಿದ ಪಠ್ಯವನ್ನು ಓದುವುದು ಯಾಕೆ ಸಾಧ್ಯವಾಗುತ್ತಿಲ್ಲ ಎಂಬುದನ್ನು ಗುರುತಿಸುತ್ತೇನೆ. ಹೀಗೆ ಸ್ವತಃ ಓದುವ ಸಾಮರ್ಥ್ಯವನ್ನು ಪಡೆದು ಸ್ವತಂತ್ರ ಓದುಗನಾ/ಳಾಗುವುದು ಬಹಳ ನಿರ್ಣಾಯಕವಾದ ಅಂಶ ಎಂಬ ವಾದವನ್ನು ನಾನಿಲ್ಲಿ ನಿಮ್ಮ ಮುಂದಿಡುತ್ತೇನೆ.

ಓದುವ ಮಾದರಿಗಳು

ಓರ್ವ ವ್ಯಕ್ತಿಗೆ ಓದಲು ಕಲಿಸಲು ಹಲವು ಮಾದರಿಗಳಿವೆ. ಬೋಧನೆಯ ವಿಧಾನವು ನಾವು ಯಾವ ಮಾದರಿಯನ್ನು ಆಯ್ದುಕೊಳ್ಳುತ್ತೇವೆ ಎಂಬುದರ ಮೇಲೆ ಅವಲಂಬಿತವಾಗಿರುತ್ತದೆ. ಒಂದೆಡೆ, ಕೆಳಗಿನಿಂದ ಮೇಲಕ್ಕೆ (bottom-up), ಅಂದರೆ, ಅಕ್ಷರ ಮಾಲೆಯನ್ನು ಕಲಿತು, ಪದಗಳನ್ನು ಗುರುತಿಸುವ ಮಾದರಿಯಿದೆ. ಇನ್ನೊಂದೆಡೆ, ಮೇಲಿನಿಂದ ಕೆಳಕ್ಕೆ (top-down), ಅಂದರೆ, ಒಂದು ಇಡೀ ಪದವನ್ನು ಒಟ್ಟಾರೆಯಾಗಿ ಸಮಗ್ರವಾಗಿ ಅರ್ಥಮಾಡಿಕೊಳ್ಳುವ ಮಾದರಿಯ ಓದು ಇದೆ. ಮೂರನೆದಾಗಿ, ಸಂವಾದಾತ್ಮಕ ಮತ್ತು ಪರಿಹಾರಾತ್ಮಕ ಮಾದರಿ ಇದೆ ಮತ್ತು ಇದು ಎರಡೂ ಮಾದರಿಗಳನ್ನೂ ಒಟ್ಟುಗೂಡಿಸಿ ಓದುವ ಮಾದರಿಯಾಗಿದೆ.

ಕೆಳಗಿನಿಂದ ಮೇಲಕ್ಕೆ ಚಲಿಸುವ ವಿಧಾನ

ಈ ಮಾದರಿಯು ಕರಡು ತಿದ್ದುವಿಕೆಯಲ್ಲಿ ಉಪಯೋಗಿಸಲಾಗುವ ಸಾಮರ್ಥ್ಯವನ್ನು ಬೆಳೆಸುತ್ತದೆ, ಅಂದರೆ ಇಲ್ಲಿ ಪ್ರತಿ ಅಕ್ಷರವನ್ನೂ ಗಮನಿಸಲಾಗುತ್ತದೆ, ಓದುವ ಪ್ರಕ್ರಿಯೆಯು ನಿಧಾನ ಹಾಗೂ ಪ್ರಯಾಸದ್ದಾಗಿರುತ್ತದೆ. ನಾವು ವಯಸ್ಕರು ನಮಗೆ ಅರಿಯದಂತಹ ಹೆಸರುಗಳನ್ನು ಓದುವಾಗ, ಹೆಚ್ಚಾಗಿ, ಈ ರೀತಿಯನ್ನು ಅಳವಡಿಸಿಕೊಳ್ಳುತ್ತೇವೆ (ಉದಾ, ಇಂಗ್ಲಿಷಿನ ಹೆಸರುಗಳು– Bryzinski, Urquhart, Cholomondeley, ಅಥವಾ ಇಂಗ್ಲಿಷಿನ ಪದಗಳು– semordnilap, matutoltpea, scaphoid, pococuparante, metencephalic, rhabomancy, ಮತ್ತು paraskevidekatriaphobia). ಇವೆಲ್ಲವೂ ನಿಜವಾಗಿ ಉಪಯೋಗಿಸಲಾಗುವ ಪದಗಳಾಗಿದ್ದು, ಇವನ್ನು ಅಂತರ್ಜಾಲದ ಮ್ಯಾಕ್ಮಿಲನ್ ಹಾಗೂ ರಾನ್ಡಂ ಪದಕೋಶದಲ್ಲಿ ಕಾಣಬಹುದಾಗಿದೆ.

ಮೇಲೆ ತಿಳಿಸಿರುವ ರೀತಿಯ ಅಪರಿಚಿತ ಹೆಸರುಗಳನ್ನು ಇಲ್ಲವೆ ಪದಗಳನ್ನು ಓದಲು, ಬಹುಶಃ, ಬಹುಪಾಲು ಜನ ಮೊದಲು ಅಕ್ಷರಗಳನ್ನು ಇಲ್ಲವೆ ಅಕ್ಷರಗಳ

ಉಚ್ಚಾರವನ್ನು ಒಂದಾದ ಮೇಲೆ ಇನ್ನೊಂದನ್ನು ಓದುತ್ತಾ, ಜೋಡಿಸಿಕೊಳ್ಳುತ್ತಾ ಮುಂದುವರಿಯುತ್ತಾರೆ. ಈ ರೀತಿ ಓದುವುದನ್ನು, ಗೌಹ್ (೧೯೮೫) 'ಕೆಳಗಿನಿಂದ ಮೇಲೆ' (bottom-up) ಚಲಿಸುವ ಪ್ರಕ್ರಿಯೆ ಎಂದು ಕರೆಯುತ್ತಾನೆ. ಈ ವಿಧಾನದಲ್ಲಿ ಅಕ್ಷರ/ಧ್ವನಿಗಳ ಬಿಡಿಯಿಂದ ಪದದ ಅರ್ಥದ ಇಡಿಯ ಕಡೆಗೆ ಚಲಿಸುವುದಾಗುತ್ತದೆ. ಈ ಮಾದರಿಯಲ್ಲಿ ಓದುಗನು/ಳು ಮೊದಲು ಅಕ್ಷರಗಳನ್ನು ಗುರುತಿಸುತ್ತಾನೆ/ಳೆ, ಅನಂತರ ಅದನ್ನು ಕಾಗುಣಿತಗಳಲ್ಲಿ (syllables) ಒಟ್ಟಿಗೆ (ಉದಾ– ಸ್ಪ್ರ, ಬ್ಲ್ – spr or bl – ಮುಂತಾದ ವಿನ್ಯಾಸಗಳಲ್ಲಿ) ತಂದುಕೊಂಡು, ಮತ್ತು ಕೊನೆಯಲ್ಲಿ ಪದಗಳಾಗಿ ಗುರುತಿಸಿ ಓದುತ್ತಾನೆ/ಳೆ.

ಈ ಮಾದರಿಯು ಓದುಗನಿಗೆ ಪ್ರಾಪಂಚಿಕ ಜ್ಞಾನ, ಸಾಂದರ್ಭಿಕವಾದ ಮಾಹಿತಿ, ಇಲ್ಲವೆ ಬೇರೆ ಉಚ್ಚಮಟ್ಟದ ಓದಿನ ಕೌಶಲಗಳನ್ನು ನೀಡುವುದಿಲ್ಲ. ಇಲ್ಲಿ ಓದನ್ನು ಕೇವಲ ದೃಶ್ಯ ಚಿಹ್ನೆಗಳನ್ನಾಗಿ ನೋಡಿ, ಈ ಸಂಕೇತಗಳನ್ನು ಬಿಡಿಸುವ ಪ್ರಕ್ರಿಯೆಯಾಗಿ ನೋಡಲಾಗುತ್ತದೆ. ಮೇಲಾಗಿ ನುರಿತ ಓದುಗನೊಬ್ಬ ಹೇಗೆ ಓದಬಲ್ಲ/ಳು ಎಂಬ ಸರಿಯಾದ ಚಿತ್ರಣವನ್ನು ಇದು ನೀಡುವುದಿಲ್ಲ. ಕಾರಣ ನುರಿತ ಹಾಗೂ ಬಹಳ ವೇಗವಾಗಿ ಓದಬಲ್ಲವರು ಕರಡು ತಿದ್ದುವುದರಲ್ಲಿ ಅಷ್ಟು ಉತ್ತಮರೇನಲ್ಲ ಎಂಬುದು ಎಲ್ಲರಿಗೂ ತಿಳಿದ ಸತ್ಯವಾಗಿದೆ!

ಮೇಲಿನಿಂದ ಕೆಳಕ್ಕೆ ಚಲಿಸುವ ವಿಧಾನ

ಈ ವಿಧಾನವು ವೇಗವಾಗಿ ಮತ್ತು ಒಟ್ಟಾರೆಯಾಗಿ ಪದವನ್ನು ಗುರುತಿಸುವ ಕೌಶಲವನ್ನು ಒಳಗೊಂಡಿರುತ್ತದೆ. ನಾವು ಚಿಹ್ನೆಗಳನ್ನು (ಲೋಗೊಗಳು), ಬ್ರ್ಯಾಂಡ್‌ಗಳ ಹೆಸರುಗಳನ್ನು, ಅಥವಾ ಪರಿಚಿತ ಹೆಸರುಗಳನ್ನು, ಉದಾ– ಸ್ಥಳನಾಮಗಳನ್ನು (Delhi), ಉತ್ಪನ್ನಗಳ ಹೆಸರುಗಳನ್ನು, (Xerox) ಅಥವಾ ಜನಪ್ರಿಯ ವ್ಯಕ್ತಿಗಳ ಹೆಸರುಗಳನ್ನು (Sachin Tendulkar) ಓದುವ ರೀತಿ ಇದೇ ಆಗಿದೆ. ಶಾಲೆಗಿನ್ನೂ ಹೋಗದ ಸಣ್ಣ ಮಕ್ಕಳು, ಇಲ್ಲವೆ ಅನಕ್ಷರಸ್ಥ ವಯಸ್ಕರು, ಅಂಗಡಿ ಮುಂಗಟ್ಟುಗಳಲ್ಲಿರುವ ಚಿಹ್ನಾಫಲಕಗಳನ್ನು ಅಥವಾ ಕೆಲವು ಉತ್ಪನ್ನಗಳ ಹೆಸರುಗಳನ್ನು (ಜನಪ್ರಿಯ ಸೋಪು, ಟೂತ್‌ಪೇಸ್ಟ್) ಈ ರೀತಿಯಲ್ಲಿ ಗುರುತಿಸುತ್ತಾರೆ. ಹೀಗಾಗಿಯೇ ಹಲವಾರು ಸಣ್ಣಪುಟ್ಟ ಕಂಪನಿಗಳು ತಮ್ಮ ಉತ್ಪನ್ನಗಳ ಹೆಸರು ಹಾಗೂ ಲೋಗೋಗಳು ದೊಡ್ಡ ಕಂಪನಿಗಳ ಜನಪ್ರಿಯ ಉತ್ಪನ್ನಗಳ ಹೆಸರು ಹಾಗೂ ಲೋಗೊಗಳನ್ನು ಹೋಲುವಂತೆ ನೋಡಿಕೊಳ್ಳುತ್ತಾರೆ!

ಮಾಹಿತಿಯನ್ನು ಪಡೆಯಲೆಂದೇ ನಾವೆಲ್ಲರೂ ಓದುತ್ತೇವೆ. ಇದಕ್ಕಾಗಿ ನಮ್ಮ ಪ್ರಾಪಂಚಿಕ ಜ್ಞಾನವನ್ನು ಹಾಗೂ ಸಾಂದರ್ಭಿಕ ಮಾಹಿತಿಯನ್ನು ಬಳಸುತ್ತೇವೆ.

ಅರ್ಥ ಮಾಸಿಹೋದ ಇಲ್ಲವೆ ಅರ್ಥ ಮರೆಯಾಗಿರುವ ಪದಗಳನ್ನು ನಾವು ಓದುವುದು ಸಹ ಈ ರೀತಿಯಲ್ಲಿಯೇ ಆಗಿರುತ್ತದೆ. ಅಪೂರ್ಣವಾಗಿ ಕಾಣುವ ಈ ವಾಕ್ಯವನ್ನು ನಾವು ಹೀಗೆಯೇ ಓದಬಲ್ಲೆವು– 'ನಿನ್ನೆ ನಾವು ಮಕ್ಕಳನ್ನು ಜೂಗೆ ಕರೆದುಕೊಂಡು ಹೋದೆವು. ಅಲ್ಲಿ ಸಿಂಹ ಹಾಗೂ ಹುಲಿಗಳನ್ನು ನೋಡಿದೆವು'.

ಮೇಲಿನಿಂದ ಕೆಳಕ್ಕೆ ಚಲಿಸುವ ಮಾದರಿಯ ಓದಿನಲ್ಲಿ, ಓದುಗನು ಪದದ ಇಡಿಯಿಂದ ಪದದ ಭಾಗಶಃಕ್ಕೆ ಮತ್ತು ಒಟ್ಟಾರೆ ಅರ್ಥವನ್ನು ಹಿಡಿಯುವುದಕ್ಕೆ ಮುಂದುವರಿಯುತ್ತಾನೆ. ಅಂತಹ ಸಂದರ್ಭ, ಓದುಗ ಪಠ್ಯಕ್ಕೆ ತನ್ನ ಪ್ರಾಪಂಚಿಕ ಜ್ಞಾನವನ್ನು ಹಾಗೂ ಭಾಷೆಯ ಅರಿವನ್ನೂ ತಂದುಕೊಳ್ಳುತ್ತಾನೆ/ಳೆ. ಮೇಲಿನಿಂದ ಕೆಳಕ್ಕೆ ಬರುವ ವಿಧಾನದಲ್ಲಿ ನಾವು ಪಠ್ಯದಲ್ಲಿ ಮುಂದೇನು ಬರಬಹುದು ಎಂಬುದನ್ನು ಚೆನ್ನಾಗಿ ಊಹೆ ಮಾಡುತ್ತೇವೆ.

ಸಂವಾದಾತ್ಮಕ ಮತ್ತು ಪರಿಹಾರಾತ್ಮಕ ಮಾದರಿ

ಈ ಮಾದರಿಯು ಏನು ಹೇಳುತ್ತದೆ ಎಂದರೆ, ನುರಿತ ಓದುಗರು ಯಾವುದೇ ಪಠ್ಯವನ್ನು ಓದುವಾಗ, ಎರಡೂ ಮಾದರಿಗಳನ್ನು– ಕೆಳಗಿನಿಂದ ಮೇಲೆ, ಮತ್ತು ಮೇಲಿನಿಂದ ಕೆಳಗೆ ಮಾದರಿಗಳನ್ನು – ಆವಶ್ಯಕತೆಗೆ ಅನುಸಾರವಾಗಿ ಉಪಯೋಗಿಸುತ್ತಾರೆ. ಭಾಷೆಯನ್ನು ಕುರಿತು ಯಾವುದೇ ಅರಿವಿಲ್ಲದ ವ್ಯಕ್ತಿಗಿಂತ, ಈಗಾಗಲೆ ತಿಳುವಳಿಕೆ ಇರುವ ವ್ಯಕ್ತಿಯು ಮುಂಬರುವ ಪದವನ್ನು ಊಹಿಸಬಲ್ಲ. ಅಂತಹ ವ್ಯಕ್ತಿಯು ಕೆಳಸ್ತರದಿಂದ ಮೇಲೆ ಹೋಗುವ ಮಾದರಿಯನ್ನು ಉಪಯೋಗಿಸುತ್ತಲೇ, ತನಗಿರುವ ಪ್ರಪಂಚ ಜ್ಞಾನ ಮತ್ತು ವಿಷಯ ಜ್ಞಾನವನ್ನು ಉಪಯೋಗಿಸಿ, ಪದವನ್ನು ಊಹಿಸುವ ಕೆಲಸವನ್ನೂ ಮಾಡುತ್ತಾನೆ.

ವಿಭಿನ್ನ ಪಠ್ಯಗಳು ವಿವಿಧ ಓದಿನ ಮಾದರಿಗಳನ್ನು ಬಳಸಿಕೊಳ್ಳುತ್ತವೆ. ಉದಾಹರಣೆಗೆ, ಪತ್ತೇದಾರಿ ಕಾದಂಬರಿಯನ್ನು ವೇಗವಾಗಿ ಓದಿ ಮುಗಿಸಲು ಉಪಯೋಗಿಸುವ ಓದಿನ ಮಾದರಿ ಒಂದು ರೀತಿಯದ್ದಾಗಿದ್ದರೆ, ಒಂದು ಅಂತರರಾಷ್ಟ್ರೀಯ ಸಮ್ಮೇಳನದಲ್ಲಿ ಬಂದಿರುವ ವಿದೇಶಿ ಪ್ರತಿನಿಧಿಗಳ ಹೆಸರುಗಳನ್ನು ಓದಲು, ಅಂದರೆ ಸಾಂಸ್ಕೃತಿಕವಾಗಿ ಪರಿಚಿತವಲ್ಲದ ಹೆಸರುಗಳ ಪಟ್ಟಿಯನ್ನು ಓದಲು ಉಪಯೋಗಿಸಲಾಗುವ ಓದಿನ ಪರಿಯೇ ಬೇರೆ. ಆದರೆ, ನಾವು ಬಸ್ಸಿನ ಬೋರ್ಡುಗಳನ್ನು ಒಮ್ಮೆ ಕಣ್ಣಾಡಿಸುತ್ತಲೇ ಗುರುತಿಸಿಬಿಡುತ್ತೇವೆ. ಇದು ನಾವು ಹೋಗಬೇಕಾದ ಬಸ್ಸು ಹೌದೋ ಅಲ್ಲವೋ ಎಂಬುದು ನಮಗೆ ಬಹುಬೇಗ ತಿಳಿಯುತ್ತದೆ. ಹೀಗಾಗಿ ಓದುವ ಹಲವಾರು ಕೌಶಲ್ಯಗಳು ಹಾಗೂ ವಿಧಾನಗಳ

ಸಂಗ್ರಹವೇ ನಮ್ಮಲ್ಲಿವೆ, ಹಾಗೂ ಈ ಓದುವ ಮಾದರಿಗಳು ಪರಸ್ಪರ ಪ್ರತ್ಯೇಕವೆಂದೇನಲ್ಲ.

ಓದುವುದನ್ನು ಕಲಿಸುವ ಈ ಎಲ್ಲ ವಿವಿಧ ಮಾದರಿಗಳು ಒಂದಕ್ಕೊಂದು ಪೂರಕವಾಗಿ ಅವನ್ನು ಬಳಸಿಕೊಳ್ಳುವ ತಂತ್ರಗಾರಿಕೆಯನ್ನೂ ನಮಗೆ ತೋರಿಸಿಕೊಡುತ್ತದೆ. ಉತ್ತಮ ಆರೋಗ್ಯಕ್ಕೆ ಹೇಗೆ ಪರ್ಯಾಯ ಮಾರ್ಗಗಳಿವೆಯೋ– ಸರಿಯಾದ ಆಹಾರ ಮತ್ತು ವ್ಯಾಯಾಮದ ಮೂಲಕ, ಯೋಗ ಮತ್ತು ಧ್ಯಾನದ ಮೂಲಕ, ಇಲ್ಲವೆ ಔಷಧಿ ಉಪಚಾರ ಹಾಗೂ ಶಸ್ತ್ರ ಚಿಕಿತ್ಸೆಯ ಮೂಲಕ– ಹಾಗೆಯೇ ಸಾಕ್ಷರತೆ ಹಾಗೂ ಓದುವ ಶೈಕ್ಷಣಿಕ ವಿಧಾನಗಳಿಗೂ ಪರ್ಯಾಯ ಮಾರ್ಗಗಳು ಇವೆ. ವಿವಿಧ ತಂತ್ರಗಳು ವಿಭಿನ್ನ ಓದುಗರಿಗೆ ಬೇರೆಬೇರೆ ಸಂದರ್ಭಗಳಲ್ಲಿ ಸಹಾಯಕವಾಗುತ್ತವೆ. ಹೀಗೆ ಶಿಕ್ಷಕರು, ಸಾಕ್ಷರತೆಗೆ ವಿಭಿನ್ನ ಮಾರ್ಗಗಳಿವೆ ಎಂಬ ಅರಿವನ್ನು ಹೊಂದಿರಬೇಕು, ಹಾಗೂ ಇವೆಲ್ಲ ಮಾದರಿಗಳು ಒಂದಕ್ಕೊಂದು ಪ್ರತ್ಯೇಕವಲ್ಲ, ಬದಲಿಗೆ ಪೂರಕವಾಗಿವೆ ಎಂದೂ ತಿಳಿಯಬೇಕು. ಇದರ ಜೊತೆಗೆ, ಓದಿನ ಬೋಧನಾಶಾಸ್ತ್ರವು, ಓದನ್ನು ಕಲಿಸುವುದಕ್ಕೆ ಈ ಹಲವಾರು ಮಾದರಿಗಳ ಇರುವಿಕೆ ಕುರಿತು ಶಿಕ್ಷಕರಲ್ಲಿ ಅರಿವನ್ನು ಮೂಡಿಸಬೇಕಾಗಿದೆ. ಎಲ್ಲ ಸಮಯದಲ್ಲೂ, ಎಲ್ಲರಿಗೂ ಎಲ್ಲ ಕಾಲಕ್ಕೂ ಸರಿಹೊಂದುವ ಒಂದು ಬೋಧನಾ ಕ್ರಮವೆಂಬುದು ಇಲ್ಲ ಎಂಬುದನ್ನು ನಾವು ಮೊದಲು ಮನಗಾಣಬೇಕು.

ಕಲಿಕಾರ್ಥಿಯ ಸ್ವಾಯತ್ತತೆ ಹಾಗೂ ಕಲಿಕಾರ್ಥಿ ಆರಿಸಿಕೊಂಡ ಪಠ್ಯಗಳು

ತರಗತಿಯು ವಿಭಿನ್ನ ವ್ಯಕ್ತಿಗಳ ಸಮೂಹವಾಗಿದೆ. ಬೋಧನಾಶಾಸ್ತ್ರವೆಂಬುದು ಕೇವಲ ಪಠ್ಯಕ್ರಮವನ್ನು ಬೋಧಿಸಿ ಮುಗಿಸುವುದಲ್ಲ ಅಥವಾ ಕೌಶಲ್ಯ ಜ್ಞಾನವನ್ನು ಹಂಚುವುದೂ ಅಲ್ಲ, ಬದಲಿಗೆ ಅದು ಪ್ರತಿಯೊಬ್ಬ ವ್ಯಕ್ತಿಯ ಬುದ್ಧಿ ಮತ್ತು ಮನಸ್ಸಿನ ಮೇಲೆ ಪರಿಣಾಮ ಬೀರುವುದಾಗಿದೆ. ತರಗತಿಯೊಂದರಲ್ಲಿ ಇರುವ ಅನೇಕ ಮನಸ್ಸುಗಳು ಒಟ್ಟಿಗೆ ಒಂದು ಬೌದ್ಧಿಕ ಚಟುವಟಿಕೆಯ ಪ್ರಕ್ರಿಯೆಯಲ್ಲಿ ತೊಡಗಿಕೊಂಡಾಗ, ಅವರು ಈ ಚಟುವಟಿಕೆಯ ಜವಾಬ್ದಾರಿಯನ್ನು ತೆಗೆದುಕೊಳ್ಳಲು ಮತ್ತು ತಮ್ಮತಮ್ಮ ಬೌದ್ಧಿಕ ಸಾಮರ್ಥ್ಯ ಹಾಗೂ ಮಿತಿಗಳನ್ನು ಹುಡುಕಿಕೊಳ್ಳಲು ಪ್ರಾರಂಭಿಸುತ್ತಾರೆ. ಇದು ಅವರು ಆಟದ ಮೈದಾನದಲ್ಲಿ ತಮ್ಮ ದೈಹಿಕ ಸಾಮರ್ಥ್ಯವನ್ನು ಅರಿಯುವ ರೀತಿಯಲ್ಲಿಯೇ ಇದೆ. ಕಲಿಕೆ ಎಂಬುದು ಮಾನಸಿಕ ವ್ಯಾಯಾಮವಾಗಿದೆ. ಆ ಮೂಲಕ ಮಾನಸಿಕ ಸ್ನಾಯುಗಳು ಬಲಗೊಳ್ಳುತ್ತವೆ.

ಹೀಗಾಗಿ ಮಗುವೊಂದು ಓದಲು ಪ್ರಯತ್ನಿಸಿದಾಗ ಮಾತ್ರ ಓದುವ ಕಲಿಕೆ ಉತ್ತಮವಾಗಿ ರೂಪುಗೊಳ್ಳಲು ಸಾಧ್ಯ. ಹಾಗೂ ಪ್ರತಿ ಮಗುವಿನ ಓದೂ ಆ

ಮಗುವಿಗೆ ಆಸಕ್ತಿದಾಯಕವೆನಿಸುವ, ಹಾಗೂ ತನಗೆ ತಕ್ಕನಾದ ಸವಾಲಿನ ಮಟ್ಟವನ್ನು ಪೂರೈಸುವಂತಹ ಪಠ್ಯವನ್ನು ಆರಿಸಿಕೊಳ್ಳುವ ಮೂಲಕ ಆಗುತ್ತದೆ. ಕ್ರಾಶನ್ (೧೯೮೫) "i+1"ಎಂಬ ಪರಿಕಲ್ಪನೆಯನ್ನು ಬೌದ್ಧಿಕ ವಲಯಗಳಲ್ಲಿ ವ್ಯಕ್ತಿಯ ಭಾಷೆಯ ಬೆಳವಣಿಗೆಯನ್ನು ವಿವರಿಸಲು ಉಪಯೋಗಿಸುತ್ತಾರೆ. ನಿಮ್ಮ ಸಾಮರ್ಥ್ಯವು "i" ಮಟ್ಟದಲ್ಲಿದ್ದರೆ, ನಿಮ್ಮ 'i' ಸಾಮರ್ಥ್ಯದ ಹಂತಕ್ಕಿಂತ ಒಂದು ಮಟ್ಟ ('+1') ಹೆಚ್ಚಿರುವ ಭಾಷಾ ಸಂಕೀರ್ಣತೆಗೆ ನೀವು ಒಡ್ಡಿಕೊಳ್ಳುವ ಮೂಲಕ, ನಿಮ್ಮ ಭಾಷೆಯ ಕಲಿಕೆ ಅತ್ಯುತ್ತಮವಾಗಲು ಸಾಧ್ಯವಿದೆ. ಮನಃಶಾಸ್ತ್ರಜ್ಞ ವೈಗೊಟ್ಸ್‌ಕಿಯು (೧೯೭೮) 'ಬೆಳವಣಿಗೆಯ ಸಮೀಪ ವಲಯ' (zone of proximal development) ಎಂಬ ಪರಿಕಲ್ಪನೆಯನ್ನು ಮುಂದಿಡುತ್ತಾನೆ. ಇದರಡಿಯಲ್ಲಿ ಒಬ್ಬ ವ್ಯಕ್ತಿಯು ಬೇರೆಯವರಿಂದ ನೆರವು ಪಡೆದು ಪರಿಹಾರಗಳನ್ನು ಕಂಡುಕೊಳ್ಳುತ್ತಾನೆ/ಳೆ. ಇದು ಸ್ವತಃ ಪರಿಹಾರಗಳನ್ನು ಕಂಡುಕೊಳ್ಳುವ ಸವಾಲುಗಳಿಗಿಂತ ಸ್ವಲ್ಪ ಸಂಕೀರ್ಣವಾದ ಸವಾಲುಗಳಾಗಿರುತ್ತವೆ. ಈ ಒಳನೋಟಗಳನ್ನು, "+1"ನ್ನು, ಇಲ್ಲವೆ ಬೆಳವಣಿಗೆಯ ಸಮೀಪ ವಲಯದ ಅರ್ಥವನ್ನು, ನಾವೇ ಕಂಡುಕೊಳ್ಳಬೇಕು ಎಂದು ತಿಳಿಸುತ್ತದೆ. ವ್ಯಕ್ತಿಯೊಬ್ಬನಿಗೆ ಎಷ್ಟು ಹಸಿವಾಗಿದೆ ಇಲ್ಲವೆ ನಿದ್ದೆಯ ಆವಶ್ಯಕತೆ ಎಷ್ಟಿದೆ ಎಂಬುದನ್ನು ಸೂಚಿಸುವುದು ಎಷ್ಟು ಕಷ್ಟಕರವೋ, ಹಾಗೆಯೇ, ವ್ಯಕ್ತಿಯೊಬ್ಬನಿಗೆ ಇದನ್ನೇ ಓದಬೇಕೆಂದು ಹೇಳುವುದೂ ಕಷ್ಟಕರವಾದುದು. ಒಂದು ದಿನಚರಿಗೆ ಒಳಪಡಿಸುವ ಮೂಲಕ ಪಾಲಕರು ಹಸಿವು ಹಾಗೂ ನಿದ್ದೆಯನ್ನು ವ್ಯವಸ್ಥಿತವಾಗಿ ನೋಡಿಕೊಳ್ಳುವ ಹಾಗೆ, ಓದಿಗೂ ಒಂದು ರೀತಿಯ ವಿಧಾನ ಬೇಕಾಗುತ್ತದೆ.

ಆದುದರಿಂದ, ನಮ್ಮ ಶಾಲೆಗಳಲ್ಲಿ ಕಥೆಗಳನ್ನು ಗಟ್ಟಿಯಾಗಿ ಓದುವುದನ್ನು ಮೊದಲ ಹಂತದಲ್ಲಿ ಹೆಚ್ಚುಹೆಚ್ಚು ಮಾಡಬೇಕು. ಹಾಗೂ ಅನಂತರದ ಹಂತಗಳಲ್ಲಿ ಹೆಚ್ಚುವರಿ ಓದುವ ಸಮಯವನ್ನು ಮಕ್ಕಳಿಗೆ ನಿಗದಿ ಪಡಿಸಬೇಕು. ಓದುಗನ ಸ್ವಾಯತ್ತತೆಯನ್ನು ನಿಗದಿತ ಪಠ್ಯಕ್ರಮವನ್ನೇ ಉಪಯೋಗಿಸಿ ಪ್ರೋತ್ಸಾಹಿಸಲು ಸಾಧ್ಯವಿದೆ. ನನ್ನ ಮತ್ತೊಂದು ಲೇಖನದಲ್ಲಿ ನನ್ನದೇ ಅನುಭವಕ್ಕೆ ಬಂದ ಉದಾಹಣೆಯನ್ನು ವಿವರಿಸಿದ್ದೇನೆ (ಅಮೃತವಲ್ಲಿ ೨೦೦೭). ಒಮ್ಮೆ ಅವಕಾಶ ವಂಚಿತರಾದ ಮಕ್ಕಳ ಗುಂಪೊಂದಕ್ಕೆ (ನಿರೀಕ್ಷಿತ ಮಟ್ಟಕ್ಕಿಂತ ಅವರ ಇಂಗ್ಲಿಷ್ ಕೆಳಗಿತ್ತು) ಪಠ್ಯ ಪುಸ್ತಕದಲ್ಲಿ 'ತಮಗೆ ಸಾಧ್ಯವಾಗುವ ಯಾವುದಾದರೂ ಒಂದು ಭಾಗ'ವನ್ನು ಆಯ್ದುಕೊಂಡು ಓದಲು ಹೇಳಲಾಯಿತು. ಆಗ ಪ್ರತಿ ಮಗುವೂ, ಕೇವಲ ಎರಡೇ ಸಾಲುಗಳಾದರೂ ಸರಿಯೆ, ಓದಲು ಏನೋ ಒಂದು ಭಾಗವನ್ನು ಆಯ್ದುಕೊಂಡು ಓದಿ ತೋರಿಸಿತು. ಆಶ್ಚರ್ಯವೆಂದರೆ, ಮಕ್ಕಳು ಸ್ವತಃ ಓದಲು ಸಾಧ್ಯವಾಗುವ ಪಠ್ಯವೊಂದು ಮುಖ್ಯ ಪಠ್ಯದ ಒಳಗಿರುತ್ತದೆ ಎಂಬುದನ್ನೂ ಈ

ಮೂಲಕ ನಾವು ಕಂಡುಕೊಂಡೆವು. 'ಪಠ್ಯದೊಳಗಿನ ಪಠ್ಯ' ಎಂಬುದರಲ್ಲಿ ಇರುವ ವಿಷಯಗಳು ಇವು: ೧) ಚಿತ್ರಗಳು ಮಾತ್ರವಿರುವ ಪುಟಗಳು (ರೇಖಾ ಚಿತ್ರಗಳು ಇರುವವು) ೨) ಪಠ್ಯದಲ್ಲಿ ನಿಗದಿತವಲ್ಲದ ಓದುವ ಭಾಗಗಳು, ೩) ಪದ್ಯಗಳು, ಮತ್ತು ಅಭ್ಯಾಸ ಮಾಡಲೆಂದು ಕೊಟ್ಟ ಇತರೇ ಸಾಮಗ್ರಿಗಳಾದ ಸಂಭಾಷಣೆಯ ಚಟುವಟಿಕೆಗಳು, ಪದ ಕಲಿಯುವ ಚಟುವಟಿಕೆಗಳು, ವ್ಯಾಕರಣ ಚಟುವಟಿಕೆಗಳು, ಇತ್ಯಾದಿಗಳು. ಅಂದರೆ, ಯಾವುದು ಚಿಕ್ಕದಾಗಿದ್ದು ಓದುಗನಿಗೆ ಓದಲು ಸಾಧ್ಯವೆನಿಸುವುದೊ ಅಂಥವು- ಪುಟ್ಟ ವಾಕ್ಯವೃಂದಗಳು, ಒಬ್ಬರಾದ ಮೇಲೆ ಒಬ್ಬರು ಓದಬೇಕಾದವು ಮತ್ತು ಸಂಭಾಷಣೆಗಳು, ಸಣ್ಣವಾಕ್ಯಗಳು (ಪದ್ಯಗಳಲ್ಲಿರುವಂಥ), ಮತ್ತು ಬಹಳ ಮುಖ್ಯವಾಗಿ, ಸಣ್ಣ ಪುಟ್ಟ ಪಠ್ಯಗಳನ್ನು ಅವರು ಆರಿಸಿಕೊಳ್ಳುತ್ತಾರೆ. ಇವೆಲ್ಲವು ಎರಡು ಮೂರು ದಿನಗಳವರೆಗೆ ಕಲಿಸಬಹುದಾದ ೩-೪ ಪುಟಗಳ ಪಠ್ಯವಲ್ಲ, ಬದಲಾಗಿ ಕಾಲು ಗಂಟೆಯಲ್ಲಿ ಓದಿ ಮುಗಿಸಬಹುದಾದ ಪಠ್ಯಗಳು.

ಹಾಗೆ ನೋಡಿದರೆ, ದಿನನಿತ್ಯ ನಾವು ಸಾಮಾನ್ಯವಾಗಿ ಸಣ್ಣ ಪಠ್ಯಗಳನ್ನೇ ಹೆಚ್ಚು ಓದುತ್ತೇವೆ. ಓದಿನ ಬಗ್ಗೆ ಅಪಾರ ಒಲವಿದ್ದವರು ಮಾತ್ರ ದೊಡ್ಡ ಕಾದಂಬರಿಗಳನ್ನು ಓದುತ್ತಾರೆ, ಇಲ್ಲವೆ ಶೈಕ್ಷಣಿಕ ವಲಯದಲ್ಲಿರುವರು, ಇಲ್ಲವೆ ಶಿಕ್ಷಕರಾಗಿರುವವರು ಮಾತ್ರ ಸುದೀರ್ಘವಾದ ಪಠ್ಯಗಳನ್ನು ಓದುತ್ತಾರೆ. ಪ್ರತಿನಿತ್ಯದ ಓದು ಸಹ ಅಲ್ಪಾವಧಿಯಲ್ಲಿ ನಡೆಯುವ, ನಮಗೆ ಬೇಕಾದ ಮಾಹಿತಿ, ಆಸಕ್ತಿಗಳಿಗೆ ಸಂಬಂಧಿಸಿದ ವಿಚಾರಗಳ ಕುರಿತಾಗಿಯೇ ಇರುತ್ತದೆ. ಇಂಗ್ಲೆಂಡಿನಲ್ಲಿ ನಡೆಸಲಾದ ಒಂದು ಸಂಶೋಧನೆಯು, ಮಕ್ಕಳು ಪದ್ಯಗಳನ್ನು ಓದಲು ಹೆಚ್ಚು ಬಯಸುತ್ತಾರೆ, ಹಾಗೂ ಶೈಕ್ಷಣಿಕವಾಗಿ ದುರ್ಬಲರೆನಿಸಿಕೊಂಡ ಮಕ್ಕಳು ಸಹಾ ಪದ್ಯವನ್ನು ಓದಲು ಬಯಸುತ್ತಾರೆ ಎಂದು ಹೇಳುತ್ತದೆ (ಹಾಲ್ ಅಂಡ್ ಕೋಲ್, ೧೯೯೯). ಇದಕ್ಕೆ ಕಾರಣ, ಪದ್ಯಗಳು ಚಿಕ್ಕ ವಾಕ್ಯಗಳನ್ನು ಹೊಂದಿದ್ದು, ಅದರಲ್ಲಿನ ಪ್ರಾಸ ಹಾಗೂ ಲಯ ಪಠ್ಯದಲ್ಲಿ ಮುಂದೇನು ಬರಬಹುದು ಎದು ಊಹಿಸಲು ಸುಲಭಮಾಡಿ ಕೊಡುವುದೇ ಆಗಿದೆ.

ಕೊನೆಯದಾಗಿ, ನಮ್ಮ ದಿನನಿತ್ಯದ ಬದುಕಿನಲ್ಲಿ ನಮಗೇನು ಬೇಕೋ ಅದನ್ನೇ ನಾವು ಓದುತ್ತೇವೆ. ಆದರೆ ತರಗತಿಯಲ್ಲಿ ಈ ಆಯ್ಕೆ ಮಗುವಿಗೆ ದೊರಕುವುದಿಲ್ಲ. ಮಗು ತನಗೆ ಬೇಕಾದ ಪಠ್ಯವನ್ನು ಓದುವ ಸ್ವಾತಂತ್ರ್ಯದ ಮೇಲೆಯೇ ಆ ಮಗು ಓದಲು ಮಾಡುವ ಪ್ರಯತ್ನ ಹಾಗೂ ಸಾಮರ್ಥ್ಯವು ಅವಲಂಬಿತವಾಗಿರುತ್ತದೆ. ಇದನ್ನು ಸ್ಪಷ್ಟವಾಗಿ ವಿವರಿಸಲು ಒಂದು ಪ್ರಸಂಗವನ್ನು ನಿಮಗೆ ಹೇಳುತ್ತೇನೆ. ೯ ವಯಸ್ಸಿನ ಮಕ್ಕಳ ಗುಂಪೊಂದು ದ್ವಿತೀಯ ಭಾಷೆಯಾಗಿ

ತೆಲುಗನ್ನು, ಸುಮಾರು ಮೂರು ವರ್ಷಗಳವರೆಗೆ ಕಲಿಯಿತು. ಈ ಮಕ್ಕಳ ಶಿಕ್ಷಕಿಯು, ಅವರೆಲ್ಲ ತಮ್ಮ ಬೇಸಿಗೆ ರಜೆಯನ್ನು ಮುಗಿಸಿ ವಾಪಾಸು ಬರುವಾಗ, ತೆಲುಗು ಭಾಷೆಯಲ್ಲಿ ಓದಿದ ಏನನ್ನಾದರೂ ತರಗತಿಯಲ್ಲಿ ಹಂಚಿಕೊಳ್ಳಬೇಕೆಂದು ಹೇಳಿದರು. ಹೀಗಾಗಿ ರಜೆಯಲ್ಲಿ ಮಕ್ಕಳು ತಾವು ಓದಲು ಸಾಧ್ಯವಾಗುವ ಹಾಗೂ ಅನಂತರ ಶಾಲೆಯಲ್ಲಿ ಹಂಚಿಕೊಳ್ಳಲಾಗುವ ಸಾಮಗ್ರಿಗಳನ್ನೇ ಹುಡುಕಿದರು. ಇದುವರೆಗೂ ನಿರ್ಲಕ್ಷ್ಯಕ್ಕೊಳಗಾದ ತೆಲುಗು ಪತ್ರಿಕೆಗಳು ಹಾಗೂ ಕತೆ ಪುಸ್ತಕಗಳನ್ನು ಮಕ್ಕಳು ತೆಗೆದು ನೋಡುತ್ತಿರುವುದನ್ನು, ಸ್ನೇಹಿತರೊಡನೆ ಓದುತ್ತಿರುವುದನ್ನು ಕಂಡು ಅವರ ತಂದೆ ತಾಯಂದಿರಿಗೆ ಆಶ್ಚರ್ಯವಾಯಿತು.

ಈ ಸಣ್ಣ ಲೇಖನದಲ್ಲಿ ನಾನು ಓದಲು ಬೇಕಾದ ಉಪಕೌಶಲ್ಯಗಳಾದ 'ಕಣ್ಣಾಡಿಸುವುದು' ಇಲ್ಲವೆ ಒಟ್ಟಾರೆ ಸಾರಾಂಶವನ್ನು ಗ್ರಹಿಸುವುದರ ಬಗ್ಗೆ ಪ್ರಸ್ತಾವಿಸಿಲ್ಲ. ಆದರೆ ಈ ರೀತಿಯ ಇನ್ನಿತರ ಉಪಕೌಶಲ್ಯಗಳಾವುವು ಎಂಬುದನ್ನು ನೀವೇ ಊಹಿಸಬಹುದು. ಮೇಲೆ ತಿಳಿಸಿರುವ ಸಂದರ್ಭಗಳಲ್ಲಿ, ಪ್ರತಿ ಮಗುವೂ, ತನಗೆ ದೊರಕಿದ ಪುಸ್ತಕಗಳ ಪುಟಗಳ ಮೇಲೆ ಕಣ್ಣಾಡಿಸಿ, ಒಟ್ಟಾರೆ ಅದನ್ನು ಗಮನಿಸಿ, ತನಗೆ ಬೇಕಾದ ವಿಷಯವನ್ನು ಓದಲು ಆಯ್ದುಕೊಂಡಿತು ಎಂಬುದನ್ನು ನಾವಿಲ್ಲಿ ಗಮನಿಸಬೇಕು. ಅವರು ಹಾಗೆ ಓದಬಯಸಲು ಆಯ್ದುಕೊಂಡದ್ದರಲ್ಲಿ ಪದ್ಯಗಳು, ಕಾರ್ಟೂನ್‌ಗಳು ಹಾಗೂ ಹಾಸ್ಯ ಲೇಖನಗಳು ಇದ್ದವು. ನಮ್ಮ ಸಂಸ್ಥೆಯಲ್ಲಿ ಇಂಗ್ಲಿಷ್ ಕಲಿಯಲು ಬಂದಂತಹ ಹಲವಾರು ವಯಸ್ಕ ಅಂತರರಾಷ್ಟ್ರೀಯ ವಿದ್ಯಾರ್ಥಿಗಳು, ಸಣ್ಣಪುಟ್ಟ ಪಠ್ಯಗಳನ್ನೇ ಇಂಗ್ಲಿಷಿನಲ್ಲಿ ಓದಲು ಹುಡುಕುತ್ತಿರುವುದನ್ನು ನೋಡಿದ್ದೇನೆ. ಆದರೆ ನಮ್ಮ ಶಾಲೆಗಳಲ್ಲಿ ಪಠ್ಯಕ್ರಮವಾಗಿ ಬಳಸುವ ಪುಸ್ತಕಗಳಲ್ಲಿ ಇಂಥವುಗಳನ್ನು ಸೇರಿಸಿರುವುದಿಲ್ಲ.

ಮಕ್ಕಳಾಗಲೀ ಇಲ್ಲವೇ ವಯಸ್ಕರರಾಗಲಿ, ತಾವೇನು ಓದಬೇಕೆಂಬುದನ್ನು ಅವರೇ ಆಯ್ದುಕೊಳ್ಳಬೇಕು. ಇಂಗ್ಲೆಂಡ್ ಮುಂತಾದ ದೇಶಗಳಲ್ಲಿ ಸುಲಲಿತವಾಗಿ ಓದಬಲ್ಲ ಜನರ ಗುಂಪನ್ನು ನಾವು ಗಮನಿಸಿ, ಯಾವ ರೀತಿಯ ಪಠ್ಯಗಳನ್ನು ಓದಲು ಅವರು ಆರಿಸಿಕೊಳ್ಳುತ್ತಾರೆ ಎಂಬುದರ ಬಗ್ಗೆ ಸಂಶೋಧನೆ ನಡೆಸಬೇಕಾಗಿದೆ. ಇದು ನಾವು ನಮ್ಮ ಶಾಲೆಗಳಲ್ಲಿ ನಿರ್ದಿಷ್ಟ ವಯೋಮಾನದ ಮಕ್ಕಳು ಯಶಸ್ವೀ ಓದುವ ಕಾರ್ಯಕ್ರಮಗಳಿಗೆ ಯಾವ ಪಠ್ಯಗಳನ್ನು ಆರಿಸಿಕೊಳ್ಳಬಹುದೆಂದು ನಿರ್ಧರಿಸಲು ಒಂದು ಅಳತೆಗೋಲನ್ನು ನಮಗೆ ನೀಡಬಹುದೇನೋ!

* * *

ಪರಾಮರ್ಶನೆಗಳು:

1. Amritavalli, R. (2007).English in deprived circumstances: Maximising learner autonomy. New Delhi, India: Cambridge University Press.
2. Gough, P. B. (1985). One second of reading. In H Singer and R Ruddell (Eds.), Theoretical models and processes of reading (2nd ed.) (pp. 509-535). Newark, DE: IRA.
3. Hall, Christine, & Coles, Martin (1999).Children's reading choices. London: Routledge.
4. Krashen, S (1985). The input hypothesis: Issues and implications.California:Laredo Publishing Co Inc.
5. Vygotsky, L S (1986). Thought and language. Cambridge: MIT Press.

ಚಿಂತನಾತ್ಮಕ ಪ್ರಶ್ನೆಗಳು:

೧. ಮಕ್ಕಳು ನಿಜವಾದ ಅರ್ಥದಲ್ಲಿ ಓದುಗರಾಗುವುದು ಎಂದರೇನು ಎಂಬುದನ್ನು ಚರ್ಚಿಸಿ.

೨. ಲೇಖನದಲ್ಲಿ ಪ್ರಸ್ತಾವಿಸಿರುವ ಓದಿನ ಮಾದರಿಗಳಾವುವು? ಅವುಗಳನ್ನು ಪರಸ್ಪರ ಹೋಲಿಸಿ ಮತ್ತು ಚರ್ಚಿಸಿ.

೩. ನಿಮ್ಮ ಪ್ರಾಥಮಿಕ ವಿದ್ಯಾಭ್ಯಾಸದ ಸಮಯದಲ್ಲಿ ನೀವು ಓದುವುದನ್ನು ಕಲಿತ ಮಾದರಿ ಯಾವುದು? ಅದು ಯಾಕೆ ಹಾಗಿತ್ತು?

ಆರ್ ಅಮೃತವಲ್ಲಿ: ಅವರು ಭಾಷೆಯ ಪದ ಮತ್ತು ವಾಕ್ಯಗಳ ರಚನಾತ್ಮಕತೆಯಲ್ಲಿ ಆಸಕ್ತಿಹೊಂದಿರುವ ಭಾಷಾತಜ್ಞೆ, ಅವರು ಪ್ರಾಥಮಿಕ ಹಾಗೂ ದ್ವಿತೀಯ ಭಾಷಾ ಕಲಿಕೆ ಹಾಗೂ ಬೌದ್ಧಿಕ ಮನೋಶಾಸ್ತ್ರದಲ್ಲಿ ಆಸಕ್ತರು. ಅವರು ಹೈದರಾಬಾದಿನ ಇಂಗ್ಲಿಷ್ ಮತ್ತು ವಿದೇಶಿ ಭಾಷಾ ವಿಶ್ವವಿದ್ಯಾಲಯದಲ್ಲಿ ಪ್ರೊಫೆಸರ್ ಆಗಿ ಸೇವೆ ಸಲ್ಲಿಸುತ್ತಿದ್ದಾರೆ. amritavalli@gmail.com

ಅನುವಾದ: ಉಷಾ ಬಿ ಎನ್ / **ಪರಿಶೀಲನೆ:** ರಾಜಗೋಪಾಲ್

ಮೂಲ: Language and Language Teaching Volume 1 Number 1 January 2012.

❑